**ದಿ:03.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲು:-**ವಾದಿ ಪರ ಶ್ರೀ. **K.B.,** ವಕೀಲರಿಂದ:-

ನಾನು 5 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಕೂಲಿ ಕೆಲಸ ಮಾಡಿಕೊಂಡಿರುತ್ತೇನೆ . ನನ್ನ ಮಾವ ಶೇಖರಪ್ಪ ಎಂಬುವವರು ಸಿವಿಲ್ ಕಾಂಟ್ರಕ್ಟರ್ ಇರುತ್ತಾರೆ ಎಂದರೆ ಸರಿ. , ನಾನು ಅವರ ಬಳಿ ಮೇಸ್ತ್ರಿ ಆಗಿ ಕೆಲಸ ಮಾಡುತ್ತೇನೆ ಎಂದರೆ ಸರಿ. ನಾನು 15-20 ವರ್ಷದಿಂದ ಅವರ ಬಳಿ ಕೆಲಸ ಮಾಡುತ್ತಿದ್ದೇ ಎಂದರೆ ಸಾಕ್ಷಿ 6 ವರ್ಷದಿಂದ ಮಾಡುತ್ತಿದ್ದೇ ಎಂದು ಹೇಳುತ್ತಾರೆ . ನಾನು ಕಟ್ಟಿಗೆಹಳ್ಳಿ ಗ್ರಾಮಕ್ಕೆ ಆಗಾಗ ಬಂದು ಹೋಗಿ ಮಾಡುತ್ತೇನೆ ಎಂದರೆ ಸರಿ. ಈ ದಾವೆಯನ್ನು ವಾದಿಗಳು ದಾವಾ ಆಸ್ತಿಗಳಲ್ಲಿ ಪಾಲುವಿಭಾಗ ಕೋರಿ ಸಲ್ಲಿಸಿರುತ್ತಾರೆ . ನಾನು ಸಲ್ಲಿಸಿರುವ ತಕರಾರಿಗೆ ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ . ನನ್ನ ತಕರಾರಿನಲ್ಲಿರುವ ಎಲ್ಲಾ ಅಂಶಗಳು ಸುಳ್ಳಿನಿಂದ

ಕೂಡಿರುತ್ತವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ಮಾಹಿತಿ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಎಲ್ಲಾ ಮಾಹಿತಿ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸುವ ಮುಂಚಿತವಾಗಿ ನಾವು ಮತ್ತು ವಾದಿಗಳು ಅನ್ಯೂನ್ಯವಾಗಿದ್ದೇವು ಎಂದರೆ ಸರಿ. ವಾದಿ 3 ರವರು ಈ ಹಿಂದೆ ತೋರಟಗಟ್ಟೆ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಸದಸ್ಯರು ಆಗಿದ್ದರು ಎಂದರೆ ಸರಿ. ಸದರಿ ಚುನಾವಣೆ ಸಂದರ್ಭದಲ್ಲಿ ನಾನು ಸಹ ಅವರಿಗೆ ಸಹಕರಿಸಿರುತ್ತೇನೆ ಎಂದರೆ ಸರಿ. ಸದರಿ ಚುನಾವಣೆಯಲ್ಲಿ 3 ನೇ ವಾದಿಯವರು ಆಯ್ಕೆ ಆಗಿರುತ್ತಾರೆ ಎಂದರೆ ಸರಿ. ಈ ದಾವಾ ಆಸ್ತಿಯ ಸರ್ವೆ ನಂಬರ್ 1/6 ಇದ್ದು ಅದರ ವಿಸ್ತೀರ್ಣ 30 ಗುಂಟೆ ಇರುತ್ತದೆ . ದಾವಾ ಆಸ್ತಿ ಪಿತ್ರಾರ್ಜಿತವಾಗಿ ಬಂದಂತ ಆಸ್ತಿ ಎಂದರೆ ಸರಿ. ದಾವಾ ಆಸ್ತಿ ಮೂಲತಃ ವಾದಿ ಮತ್ತು ಪ್ರತಿವಾದಿಯರ ಅಜ್ಜನಾದ ದೊಡ್ಡಪ್ಪ ರವರಿಗೆ ಸೇರಿದ್ದು ಇರುತ್ತದೆ ಎಂದರೆ ಸರಿ. ಸದರಿ ದೊಡ್ಡಪ್ಪರವರಿಗೆ ಒಟ್ಟು 6 ಜನ ಮಕ್ಕಳು ಇರುತ್ತಾರೆ . ಅವರಲ್ಲಿ ಮೊದಲಿಗೆ ಪ್ರತಿವಾದಿ 1 ಮತ್ತು 2 ರವರ ತಂದೆ ಸಂಗಪ್ಪ ಇರುತ್ತಾರೆ ಎಂದರೆ ಸರಿ. ಎರಡನೇಯವರು ವಾದಿಯ ತಂದೆ ಬಸಪ್ಪ ಇರುತ್ತಾರೆ ಎಂದರೆ ಸರಿ. ಸದರಿ ಬಸಪ್ಪರವರಿಗೆ ಒಟ್ಟು 6 ಜನ ಮಕ್ಕಳು ಇರುತ್ತಾರೆ . ಸದರಿ 6 ಜನ ಮಕ್ಕಳೇ 1 ರಿಂದ 6 ವಾದಿಯರು ಎಂದರೆ ಸರಿ. ದೊಡ್ಡಪ್ಪ ರವರ ಮೂರನೇ ಮಗ ನನ್ನ ತಂದೆ ನಾಗಲಿಂಗಪ್ಪ ಇರುತ್ತಾರೆ ಎಂದರೆ ಸರಿ. ನಮ್ಮ ತಂದೆಗೆ ಪ್ರತಿವಾದಿ 3 ಮತ್ತು 4 ಇಬ್ಬರು ಹೆಂಡತಿಯರು ಎಂದರೆ ಸರಿ. ನಮ್ಮ ತಂದೆಗೆ ನಾನು , ಪ್ರತಿವಾದಿ 5 ಮತ್ತು 6 ರವರು ಮಕ್ಕಳು ಇರುತ್ತೇವೆ ಎಂದರೆ ಸರಿ. ದೊಡ್ಡಪ್ಪರವರ ನಾಲ್ಕನೇ ಮಗ ಚನ್ನಬಸಪ್ಪ ಇರುತ್ತಾರೆ ಎಂದರೆ ಸರಿ. ಸದರಿ ಚನ್ನಬಸಪ್ಪ ರವರಿಗೆ ಪ್ರತಿವಾದಿ 8 ಮತ್ತು 10 ಇಬ್ಬರು ಹೆಂಡತಿಯರು ಇರುತ್ತಾರೆ ಎಂದರೆ ಸರಿ. ಅವರಲ್ಲಿ ಪ್ರತಿವಾದಿ 8 ಮರಣಹೊಂದಿರುತ್ತಾರೆ ಎಂದರೆ ಸರಿ. ಸದರಿ ಚನ್ನಬಸಪ್ಪರವರಿಗೆ ಒಟ್ಟು 5 ಜನ ಮಕ್ಕಳು ಇರುತ್ತಾರೆ ಎಂದರೆ ಸಾಕ್ಷಿ 6 ಜನ ಇರುತ್ತಾರೆ ಎಂದು ಹೇಳುತ್ತಾರೆ . ದೊಡ್ಡಪ್ಪನ ಮಗಳಾದ ಗೌರಮ್ಮ ರವರಿಗೆ ಪ್ರತಿವಾದಿ 14 ರಿಂದ 18 ರವರು ಮಕ್ಕಳು ಇರುತ್ತಾರೆ ಎಂದರೆ ಸಾಕ್ಷಿ ಸುವರ್ಣಮ್ಮ ರವರು ಪ್ರತಿವಾದಿ 10 ಇರುತ್ತಾರೆ ಎಂದು ಹೇಳುತ್ತಾರೆ . ದೊಡ್ಡಪ್ಪರವರ 2 ನೇ ಮಗಳಾದ ಸಾಕಮ್ಮರವರಿಗೆ ಒಬ್ಬನೇ ಮಗ ಇದ್ದು ಅವರು ಬಸವರಾಜ್ ಇರುತ್ತಾರೆ

ಎಂದರೆ ಸರಿ. ಅವರು ಈಗ ಮರಣಹೊಂದಿರುತ್ತಾರೆ . ಅವರಿಗೆ 3 ಜನ ಮಕ್ಕಳು ಎಂದರೆ ಸಾಕ್ಷಿ ಮಂಜುನಾಥ , ಪ್ರತಿವಾದಿ 19 ರಾಜಪ್ಪ , ಪ್ರತಿವಾದಿ 20 ಮತ್ತು 21 ಇರುತ್ತಾರೆ ಹಾಗೂ ಒಬ್ಬ ಮಗಳು ಇರುತ್ತಾರೆ ಆಕೆಯ ಹೆಸರು ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ . ಸದರಿ ಮಂಜುನಾಥ ಅವರು ಮರಣಹೊಂದಿರುತ್ತಾರೆ . ದಾವಾ ಆಸ್ತಿ ಮೂಲ ಸರ್ವೆ ನಂಬರ್ 1/1 ಇದ್ದು, ಅದರ ಒಟ್ಟು ವಿಸ್ತೀರ್ಣ 4 ಎಕರೆ 4 ಗುಂಟೆ ಇರುತ್ತದೆ . ಅದರಲ್ಲಿ 2 ಗುಂಟೆ ಖರಾಬು ಇರುತ್ತದೆ ಎಂದರೆ ಸರಿ. ಖರಾಬು ಬಿಟ್ಟು ಒಟ್ಟು 4 ಎಕರೆ 2 ಗುಂಟೆ ಇರುತ್ತದೆ ಎಂದರೆ ಸರಿ. ದೊಡ್ಡಪ್ಪ ರವರು ಮರಣಾನಂತರ ದಾವಾ ಆಸ್ತಿ ಪೌತಿ ಖಾತೆಯು ಪ್ರತಿವಾದಿ 1 ಮತ್ತು 2 ರವರ ತಂದೆ ಸಂಗಪ್ಪ ರವರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ.

( ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು , ಆಲಿಸಿ ಸಮಯ ನೀಡಲಾಯಿತು )

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು